



ಯೆರಗುಪ್ಪಿಯ
ಮೊಹರಂ ಉತ್ಸವದಲ್ಲಿ ಮಹಿಳೆಯರಿಂದ
ನಡೆಯುವ ಸೆರಗು ಸೇವೆ

ಈಗ ಅಭ್ಯಾಸವಾಗಿದೆ. ಈ ಸಂಚಾರ ಇನ್ನೂ ನಡೆಯುತ್ತಲೇ ಇದೆ. ಕೊನೆಗೊಳ್ಳುವುದಿಲ್ಲ ಅನ್ನುವ ಭಾವನೆ ಸ್ಪಷ್ಟವಾಗಿದೆ.

## ಯಾವ ಚಿತ್ರ ತೆಗೆಯಲಿ?

ಜಾತ್ರೆಯಲ್ಲಿ ಯಾವ ಚಿತ್ರ ತೆಗೆಯಬೇಕು ಅಂತ ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ. ಬಿಕ್ಕಿ ಮರಡಿಯ ‘ಕೋಳಿ ತೋರುವ ಜಾತ್ರೆ’ ಮಧ್ಯಾಹ್ನ ಆರಂಭವಾಗಿ ರಾತ್ರಿ ಮುಗಿದೇಹೋಗುತ್ತದೆ. ಆದರೆ ಕರ್ನಾಟಕದ ಅತಿ ದೊಡ್ಡ ಜಾತ್ರೆಗಳಲ್ಲೊಂದಾದ ‘ಸವದತ್ತಿ ಎಲ್ಲಮ್ಮ ಜಾತ್ರೆ’ ತಿಂಗಳುಗಟ್ಟಲೆ ನಡೆಯುತ್ತದೆ. ಮೊದಲ ಉದಾಹರಣೆಯಲ್ಲಿ ಚಿತ್ರ ತೆಗೆಯುವುದು ತುಂಬಾ ಸುಲಭವಾದರೆ, ಸವದತ್ತಿಯಲ್ಲಿ ಕಾಣಸಿಗುವ ಚಿತ್ರಣಗಳು ಅನಂತಾನಂತ. ಒಂದು ಸವದತ್ತಿಯ ಜಾತ್ರೆಯನ್ನೋ ಅಥವಾ ಮೈಲಾರ ಜಾತ್ರೆಯನ್ನೋ ಅಥವಾ ಬಾದಾಮಿ ಬನಶಂಕರಿ ಜಾತ್ರೆಯನ್ನೋ ದೃಶ್ಯೀಕರಿಸಲು ವರ್ಷಗಟ್ಟಲೆ ಬೇಕಾಗಬಹುದು. ಹಾಗಾಗಿ ಜಾತ್ರೆಯನ್ನು ಒಂದು ಪ್ರಾಸೆಸ್ ಅಥವಾ ಕಾರ್ಯವಿಧಾನದ ದೃಷ್ಟಿಯಲ್ಲಿ ಫೋಟೊ ತೆಗೆದು ದಾಖಲಿಸುವ ಬದಲು ನನಗೆ ಕುತೂಹಲವೆನಿಸಿದ ದೃಶ್ಯಗಳನ್ನು, ಅನುಭವಗಳನ್ನು, ಹೃದಯಕ್ಕೆ ತಟ್ಟಿದ ಚಿತ್ರಣಗಳನ್ನು ದಾಖಲಿಸುತ್ತಿದ್ದೇನೆ.

ಗರಗದ ಮಡಿವಾಳೇಶ್ವರ ಜಾತ್ರೆಯಲ್ಲಿ ಸಾಲು ಸಾಲಾಗಿ ನಿಂತ ಹೆಣ್ಣುಮಕ್ಕಳ, ಹೆಂಗಸರ ಮತ್ತು ಮಕ್ಕಳ ಉಡುಗೆ ತೊಡುಗೆಯ ವರ್ಣವೈವಿಧ್ಯ ಅವರ ಮುಖ ಭಾವಗಳ ವೈವಿಧ್ಯಕ್ಕಿಂತ ಸುಂದರವಾಗಿ ಕಾಣುತ್ತಿರುವ ದೃಶ್ಯ ನನ್ನನ್ನು ಸೋಲಿಸಿದೆ.



ಚಿಕ್ಕಲ್ಲೂರು ಜಾತ್ರೆಯಲ್ಲಿ ಕಂಡು ಬರುವ ಮಂಟೆಸ್ವಾಮಿ ಭಜನೆಯ ತನ್ಮಯತೆ

ಚಿಕ್ಕಲ್ಲೂರು ಜಾತ್ರೆಯ ಮಂಟೇಸ್ವಾಮಿ ಗಾಯನವು ಮತ್ತು ಕೇಳಗನೊಬ್ಬನ ಭಕ್ತಿ ಪರವಶತೆಯು ನನ್ನ ವೈಯಕ್ತಿಕ ಭಕ್ತಿ ಜ್ಞಾನವನ್ನು ಪ್ರಶ್ನಿಸುತ್ತದೆ. ಕುಮಟಾದ ಬಾಡ ತೇರಿನಲ್ಲಿ ಕಂಡುಬರುವ ಹೂವಿನ ಶೃಂಗಾರದಿಂದ ಕಂಗೊಳಿಸುವ ಹೂವಿನ ಮಕ್ಕಳ ಚಿತ್ರ ಅದೇ ಊರಿನ ನನ್ನ ಅಜ್ಜಿಯು ಹೇಳುತ್ತಿದ್ದ ತೇರಿನ ವೈಭವವನ್ನು ನೆನಪಿಸುತ್ತದೆ. ಕೊಡಗಿನಲ್ಲಿ ಕಂಡುಬರುವ, ಕೇರಳದ ಥೆಯ್ಯಮ್ ಶೈಲಿಯ ಭೂತಪೂಜೆಯನ್ನು ನನ್ನ ಗೆಳೆಯರೊಬ್ಬರ ಮನೆಯಲ್ಲಿ ಉಳಿದು ನೋಡಿದ್ದು ಗಡಿ ಭಾಗದ ಜಾನಪದ ವೈವಿಧ್ಯವನ್ನು ಮತ್ತೆ ಹುಡುಕುವ ಆಸೆಯನ್ನು ಹುಟ್ಟಿಸುತ್ತವೆ. ಯೆರಗುಪ್ಪಿಯ ಮೊಹರಂ ಆಚರಣೆಯಲ್ಲಿ ಕಂಡುಬರುವ ಸೆರಗು ಸೇವೆ, ರಾತ್ರಿ ಹನ್ನೆರಡು ಗಂಟೆಗೆ ಸವಿದ ಅಬ್ದುಲ್ಲಾ ಅವರ ಮನೆಯ ಚಪಾತಿ ಬಾಜಿ ಮತ್ತು ಮುಂಜಾವಿನಲ್ಲಿ ಮೊಹರಂ ಡೋಲಿಗಳಿಗೆ ಬಸವಣ್ಣನ ದೇವಸ್ಥಾನದಲ್ಲಿ ಮಾಡುವ ಪೂಜೆಯ ದೃಶ್ಯ ಮತ್ತೆ ಜಾತ್ರೆಗೆ ಎದ್ದೋಡೋಣ ಅನ್ನಿಸುತ್ತದೆ. ಹುಬ್ಬಳ್ಳಿಯ ಸಿದ್ಧಾರೂಢ ಮಠದ ದೀಪೋತ್ಸವದ ದೀಪಗಳ ಬಣ್ಣಗಳು ಮುಸ್ಸಂಜೆಯ ಬಣ್ಣಗಳ ಜೊತೆಗೆ ಮೇಳೈಸಿದಾಗ ಕಂಡುಬಂದ ಅಮೋಘ ದೃಶ್ಯ ದೈವಿಕವಾದದ್ದು.

ಈ ಅನುಭವಗಳ ಪಟ್ಟಿ ಬೆಳೆಯುತ್ತಿದೆ. ಹಾಗೆಯೇ ನೋಡಲೇಬೇಕು ಅನಿಸಿದ ಜಾತ್ರೆಗಳ, ಆಚರಣೆಗಳ ಪಟ್ಟಿಯೂ ಬೆಳೆಯುತ್ತಿದೆ. ಹೊಸ ಹೊಸ ವಿಷಯಗಳು ದೊರಕಿದಾಗೆಲ್ಲ ಮಾಡುವ ಟಿಪ್ಪಣಿಗಳು ಪುಸ್ತಕವನ್ನು ತುಂಬುತ್ತಿವೆ. ಅದೊಂದು ಮುಗಿಯದ ಸಂಭ್ರಮ–ಸಾಹಸ.

ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಈಗಲೇ ನರಳುತ್ತಿರುವ ಈ ಸುಂದರ ಆಚರಣೆಗಳು ಕೋವಿಡ್ ಹೊಡೆತಕ್ಕೆ ಮತ್ತೆ ಕಚ್ಚಿ ಮಲಗಿವೆ. ಎಲ್ಲೋ ಒಮ್ಮೊಮ್ಮೆ ಆಚರಣೆಗಳೆಲ್ಲ ಸತ್ತು ಬರಿ ಅಂಗಡಿ ಪ್ಲಾಸ್ಟಿಕ್‌ಗಳಷ್ಟೇ ಉಳಿದುಬಿಡುತ್ತವೇನೋ ಎಂಬ ಕೆಟ್ಟ ಕನಸುಗಳೂ ಬೀಳುತ್ತಿವೆ.

ಪ್ರತಿಕ್ರಿಯಿಸಿ: feedback@sudha.co.in